International Journal of Kannada Research
www.kannadajournal.com

ISSN: 2454–5813
IJKR 2025; 11(3): 01-04
© 2025 IJKR
www.kannadajournal.com
Received: 04-04-2025
Accepted: 09-05-2025

**ನಾಗರಾಜು.ಎಂ**
ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕನ್ನಡ ವಿಭಾಗ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು ಜಯಲಕ್ಷ್ಮಿಪುರಂ, ಮೈಸೂರು, ಕರ್ನಾಟಕ, ಭಾರತ

**Corresponding Author:**
**ನಾಗರಾಜು.ಎಂ**
ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕನ್ನಡ ವಿಭಾಗ, ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜು ಜಯಲಕ್ಷ್ಮಿಪುರಂ, ಮೈಸೂರು, ಕರ್ನಾಟಕ, ಭಾರತ

# ಜೀವನ ಸಾಕ್ಷಾತ್ಕಾರಕ್ಕೆ ಇರಲಿ ನಂಬಿಕೆಯುಕ್ತ ನಡೆ

**ನಾಗರಾಜು.ಎಂ**

**DOI:** https://www.doi.org/10.22271/24545813.2025.v11.i3a.1129

## ಪೀಠಿಕೆ

ಈ ಭೂತಾಯಿಯ ಮಡಿಲಿನಲ್ಲಿ ಜನ್ಮತಾಳಿದ ಪ್ರತಿಯೊಂದು ಜೀವಿಯೂ ಶ್ರೇಷ್ಠವೇ ಆದರೂ ಮನುಷ್ಯ ಜೀವಿಗೆ ತನ್ನದೇ ಆದ ಸ್ಥಾನಮಾನಗಳಿವೆ. ಹೀಗಾಗಿಯೇ ಪುರಂದರದಾಸರು ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲಿಬ್ಯಾಡಿ ಹುಚ್ಚಪ್ಪಗಳಿರಾ ಎಂದು ಜಗತ್ತಿಗೇ ಸಾರಿದರು. ಇಲ್ಲಿ ಮನುಷ್ಯನ ಜನ್ಮ ದೊಡ್ಡದು ಎಂಬುದು ಕೇವಲ ಹುಟ್ಟಿನ ಕಾರಣಕ್ಕಾಗಿ ಅಲ್ಲಾ! ಅವನ ನಡತೆ,ಮಾನವೀಯತೆ,ಪ್ರೀತಿ,ವಿಶ್ವಾಸ,ನಂಬಿಕೆ,ಸಹಬಾಳ್ವೆ, ತ್ಯಾಗಗುಣ, ಕರುಣೆ, ಅನುಕಂಪ ಇವೆಲ್ಲವು ಮಿಳಿತಗೊಂಡು ಫಲಪುಷ್ಪವಾದಾಗ ಮಾತ್ರ ಮಾನವ ಜನ್ಮಕ್ಕೆ ಅರ್ಥವಿದೆ. ಆದರೆ ಇಂದು ಮನುಷ್ಯನ ಜೀವನದ ಬಹುಭಾಗ ಸ್ವಾರ್ಥದ ಹಾದಿಯಲ್ಲಿ ಸಾಗುತ್ತಿದೆ. ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗಿ ವರ್ತಿಸುತ್ತಾ ತನ್ನನ್ನು ತಾನು ಗುರುತಿಸಿಕೊಳ್ಳುವ ಭರದಲ್ಲಿ ಇತರರನ್ನು ಹೇಗಾದರೂ ಮಾಡಿ ತುಳಿದು ಮೇಲಕ್ಕೇರುವ ದುರ್ಗುಣಗಳನ್ನು ತನ್ನೊಳಗೆ ಸುಪ್ತವಾಗಿಟ್ಟುಕೊಂಡಿದ್ದು ತನಗೆ ಅನುಕೂಲವಾಗಬಹುದಾದ ಸಂದರ್ಭದಲ್ಲಿ ಬಳಸಿಕೊಳ್ಳುತ್ತಾನೆ. ತನ್ನ ಆತ್ಮಸಾಕ್ಷಿಗೆ ವಿರುದ್ದವಾಗಿ ನಡೆದುಕೊಳ್ಳುತ್ತಾ ಸ್ವಾರ್ಥಸಾಧನೆಗಾಗಿ ನಂಬಿಕೆದ್ರೋಹಿಯಾಗುತ್ತಿದ್ದಾನೆ. ಇದು ಸ್ವಾಸ್ಥ್ಯ ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮಕ್ಕೆ ಕಾರಣವಾಗುತ್ತಿವೆ.

## ವಿಷಯ ವಿವರಣೆ

ಪ್ರಾಚೀನ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್‌ನು “ಮನುಷ್ಯನು ಸ್ವಭಾವತಃ ಒಂದು ಸಾಮಾಜಿಕ ಪ್ರಾಣಿ” ಎಂದು ಹೇಳುತ್ತಾನೆ. ಮಾನವ ಸಂಘಜೀವಿಯಾಗಿ ಸಜ್ಜನಿಕೆ, ಸದಾಚಾರ ಉಳ್ಳವನಾಗಿರಬದುಕಬೇಕು. ಸಹಸಂಬಂಧಕ್ಕೆ ವಿಶ್ವಾಸವೆಂಬುದು ತಾಯಿಬೇರಿದ್ದಂತೆ. ಶ್ವಾಸ ಮಾನವನ ‘ಜೀವಕ್ಕೆ’ ಮೂಲವಾದರೆ ವಿಶ್ವಾಸವೆಂಬುದು ಅವನ ‘ಜೀವನದ’ ಮೂಲ. ವಿಶ್ವಾಸ ಎಂಬ ಪದಕ್ಕೆ ಭರವಸೆ, ನಂಬಿಕೆ, ನಿರೀಕ್ಷೆ, ಹಾರೈಕೆ, ಮಾತಿಗೆ ತಪ್ಪದ ಪ್ರತೀತಿ ಇವೆ ಮುಂತಾದ ಪದಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ ವಿಶಾಲಾರ್ಥದಲ್ಲಿ ಸಮಾನಧರ್ಮವನ್ನೊಳಗೊಂಡಿವೆ. ಈ ಜಗತ್ತು ನಿಂತಿರುವುದು ನಂಬಿಕೆಯ ಮೇಲೆ ಎಂಬ ಜನಪದರ ನುಡಿ ಅಕ್ಷರಶಃ ಸತ್ಯವಾದುದು.

**ವಿಶ್ವಾಸಪ್ರತಿಪನ್ನಾನಾಂ ವಂಚನೇ ಕಾ ವಿದಗ್ಧತಾ।**
**ಅಂಕಮಾರುಹ್ಯ ಸುಪ್ತಾನಾಂ ಹನನೇ ಕಿಂ ನು ಪೌರುಷಂ (ಹಿತೋಪದೇಶ ಪು.ಸಂ. ೧೦೨೪)**

ಮೇಲಿನ ಹಿತೋಪದೇಶವು ವಿಶ್ವಾಸವನ್ನು ಹೊಂದಿದವರನ್ನು ವಂಚಿಸುವುದರಲ್ಲಿ ಪಾಂಡಿತ್ಯವೆಂತಹುದು? ತೊಡೆಯ ಮೇಲೇರಿ ಮಲಗಿದವರನ್ನು ಕೊಲ್ಲುವುದರಲ್ಲಿ ಏನು ಪೌರುಷವಿದೆ? ಎಂದು ತಿಳಿಸುವ ಮೇಲಿನ ಪದ್ಯಸಾಲುಗಳ ಹಿಂದೆ ಅನಾದಿಕಾಲದಿಂದಲೂ ವಿಶ್ವಾಸದ ಕುರಿತಂತೆ ಮಹನೀಯರ ಮಾತುಗಳು ಮನುಷ್ಯನ ಜೀವನಮೌಲ್ಯದ ಸಾರವನ್ನು ತಿಳಿಸುತ್ತವೆ.

ಕ್ರಿ.ಶ ೧೨ ನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯವನ್ನು ಜಗತ್ತಿನ ಶ್ರೇಷ್ಟ ಸಾಹಿತ್ಯದ ಸಾಲಿನಲ್ಲಿ ಸೇರಿಸಬಲ್ಲ ವಚನ ಸಾಹಿತ್ಯದ ಪರಂಪರೆಯಲ್ಲಿ ಮಕುಟಮಣಿಯಂತೆ ರಾರಾಜಿಸುವ ಸಾಮಾಜಿಕ ಕ್ರಾಂತಿಯ ಹಾಗೂ ಮಾನವೀಯ ಮೌಲ್ಯಗಳ ಹರಿಕಾರ, ಅನುಭವ ಮಂಟಪವನ್ನು ಸ್ಥಾಪಿಸಿ ಶಿವಶರಣರ ಜೊತೆಗೂಡಿ ವಿಶ್ವದ ಸರ್ವಜನರ ಶ್ರೇಯಸ್ಸಿಗಾಗಿ ದುಡಿದ ಮಹಾಚೇತನ,ಭಕ್ತಿ ಮತ್ತು ಅರಿವುಗಳ ಪ್ರತಿಪಾದಕರಾದ ಜಗಜ್ಯೋತಿ ಬಸವೇಶ್ವರರು ‘ವಿಶ್ವಾಸದ’ ಮಹತ್ವವನ್ನು ಕುರಿತು ತಿಳಿಸಿರುವ ವಚನವು ಲೋಕಪ್ರಸಿದ್ಧಿಯಾಗಿದ್ದು ಸಾರ್ವಕಾಲಿಕ ಅರಿವಿನ ಆಗರವಾಗಿದೆ.

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲುಬಾರದು
ಏರಿ ನೀರುಂಬಡೆ
ಬೇಲಿ ಕೇಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ
ಕೂಡಲಸಂಗಮದೇವಾ (ವಚನ: ಭಕ್ತಸ್ಥಲ ಪುಟ ಸಂ ೪೩)

ಮೇಲಿನ ವಚನವು ನಂಬಿಕೆ ಅಥವಾ ವಿಶ್ವಾಸದ ಮಹತ್ವವನ್ನು ತಿಳಿಸುತ್ತದೆ.

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲುಬಾರದು

ಸಾಮಾನ್ಯಾರ್ಥದಲ್ಲಿ ಬದುಕಿಗಾಗಿ ಅಡುಗೆ ಮಾಡಲು ಒಲೆ ಹಚ್ಚುವುದು ಸಹಜ ಪ್ರಕ್ರಿಯೆ, ಇದು ಅನಿವಾರ್ಯಕೂಡ. ಆದರೆ ಧರೆಯೇ ಹತ್ತಿ ಉರಿಯುತ್ತಿದ್ದರೆ ಬದುಕಲು ಹೋಗುವುದಾದರೂ ಎಲ್ಲಿಗೆ? ಇರುವುದೊಂದೇ ಭೂಮಿ. ಪ್ರತಿಷ್ಠೆಗೋ,ಅಹಂಮಿಗೋ ಒಳಗಾದ ಮನುಷ್ಯ ಇಂದು ಧರೆಯನ್ನೇ ಹೊತ್ತಿ ಉರಿಸುತ್ತೇನೆ ಎನ್ನುವ ದುರ್ಬುದ್ದಿಯ ಹಾದಿ ಹಿಡಿದು ತನ್ನ ಮೇಲೆ ತಾನೇ ಮಣ್ಣಾಕಿಕೊಳ್ಳುತ್ತಿದ್ದಾನೆ. ಬೆಂಕಿ ಹುಟ್ಟಿದ ಸ್ಥಳವನ್ನು ಮೊದಲು ಸುಡುತ್ತದೆ ಎಂಬುದನ್ನು ಮರೆಯುತ್ತಿದ್ದಾನೆ. ಪ್ರಪಂಚದ ಇತಿಹಾಸದ ಪುಟಗಳಲ್ಲಿ ನೆತ್ತರ ಮಳೆಯನ್ನೇ ಸುರಿಸಿ ತಾನೂ ಮಣ್ಣಾಗಿದ್ದಾನೆ. ಇದಕ್ಕೆ ನಮ್ಮ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳೂ ಹೊರತೇನೂ ಆಗಿಲ್ಲ.ಈಗಾಗಲೇ ಎರಡು ವಿಶ್ವದ ಮಹಾ ಸಮರಗಳು ನಡೆದು ಮಾನವ ಮಾತ್ರವಲ್ಲದೆ ಕೋಟ್ಯಂತರ ಜೀವರಾಶಿ ಹರಣನೀಗಿವೆ. ೧೯೪೫ ರಲ್ಲಿ ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ಮೇಲೆ ನಡೆದ ಬಾಂಬ್ ಧಾಳಿಯ ಪರಿಣಾಮ ಇನ್ನೂ ಮಾಸಿಲ್ಲವಾದರೂ ಇಂದು ಮೂರನೇ ಮಹಾಯುದ್ಧಕ್ಕೆ ಆಹ್ವಾನ ನೀಡುವಂತೆ ಇಸ್ರೇಲ್, ಇರಾನ್, ಅಮೇರಿಕಾ ಮುಂತಾದ ರಾಷ್ಟ್ರಗಳು ಕಾದಾಟಕ್ಕೆ ನಿಂತಿವೆ. ಕಳೆದ ಕೆಲವೇ ಕೆಲವು ವರ್ಷಗಳ ಹಿಂದೆ ಆಪ್ತಸ್ನೇಹಿತರಂತಿದ್ದ ಈ ದೇಶಗಳು ಹೊತ್ತಿಕೊಂಡು ಉರಿಯುತ್ತಿವೆ. ಇಂದು ಪ್ರಪಂಚದಾದ್ಯಂತ ಅನೇಕ ದೇಶಗಳು ನಾಮುಂದು ತಾಮುಂದು ಎನ್ನುತ್ತಾ ಅಣ್ವಸ್ತ್ರಗಳ ಬಲ ಪ್ರಯೋಗದ ಮುಂದಾಗಿ ಭೂಮಿಯ ಜೀವರಾಶಿಯ ವಿನಾಶದ ಹೊಸ್ತಿಲಿನಲ್ಲಿ ನಿಂತಂತೆ ಕಾದುಕುಳಿತಿವೆ . ನಂಬಿಕೆಯ ಬದಲಾಗಿ ಅಪನಂಬಿಕೆ, ಅನುಮಾನಗಳ ಹುತ್ತ ಬೆಳೆದುನಿಂತಿದೆ. ಕನ್ನಡದ ಶ್ರೇಷ್ಠ ವಿಮರ್ಶಕರಾದ ಕಿ.ರಂ ನಾಗರಾಜರವರು ತಮ್ಮ ಕಾಲಜ್ಞಾನಿ ಕನಕ ಎಂಬ ನಾಟಕದಲ್ಲಿ ಯುದ್ಧವೆಂಬುದು ಮಾನವ ಲೋಕದ ಮಾಯದ ಗಾಯ ಎಂದು ಕನಕರಿಂದ ಹೇಳಿಸುತ್ತಾರೆ. ಈಗಲಾದರೂ "ಗೆದ್ದವನು ಸೋತ, ಸೋತವನು ಸತ್ತ"ಎಂಬ ಮಾತನ್ನು ಮರೆಯಬಾರದು. ಮದುವೆಗೋ ಮಸಣಕೋ ಎಂಬುದನ್ನು ನಾವೇ ನಿರ್ಧರಿಸಿಕೊಳ್ಳಬೇಕು. ಇಂದು ವಿಶ್ವಭ್ರಾತೃತ್ವದ ಪರಿಕಲ್ಪನೆ ನಮ್ಮ ಅಂತರಾತ್ಮದಲ್ಲಿ ಅನುರಣಿಸಬೇಕಾಗಿದೆ.

**ಏರಿ ನೀರುಂಬಡೆ**

**ಬೇಲಿ ಕೇಯ್ಯ ಮೇವಡೆ**

ರಕ್ಷಕರೇ ಭಕ್ಷಕರಾದರೆ ಇನ್ನು ಕಾಪಾಡುವವರು ಯಾರು? ನೀರನ್ನು ತಡೆದು ಮಳೆ ಬೆಳೆ ನೀಡಿ ಭೂತಾಯಿಗೆ ತಂಪುನೀಡಬೇಕಾದ ತಡೆಗೋಡೆ(ಡ್ಯಾಮ್)ಯೇ ತಾನೇ ಕುಡಿದುಕೊಂಡರೆ ಹಾಗೆಯೇ ಫಲಪುಷ್ಪಾದಿಯಾಗಿ ಸರ್ವವನ್ನು ಕಾಪಾಡಬೇಕಾದ ಬೇಲಿಯೇ ಎದ್ದು ಹೊಲ ಮೇಯ್ದರೆ ಯಾರನ್ನು ನಂಬದ ಪರಿಸ್ಥಿತಿ ಇಂದಿನ ದಿನಗಳಲ್ಲಿ ಹೆಚ್ಚಾಗಿ ಆಗುತ್ತಿದೆ. ಮಹಾತ್ಮ ಗಾಂದೀಜಿ, ಇಂದಿರಗಾಂಧಿಯವರಾದಿಯಾಗಿ ಇಂತಹ ವಂಚನೆಗೆ ಬಲಿಯಾದವರ ಸಂಖ್ಯೆ ಬಹಳಷ್ಟಿದೆ.

**ನಾರಿ ತನ್ನ ಮನೆಯಲ್ಲಿ ಕಳುವಡೆ**

ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಈ ನೆಲದ ಹೆಣ್ಣಿಗೆ ಪೂಜ್ಯನೀಯ ಸ್ಥಾನಮಾನವಿದೆ. "ಕಾರ್ಯೇಸುದಾಸಿ ಕರಣೇಶು ಮಂತ್ರಿ, ಭೋಜೇಸುಮಾತಾ ರೂಪೇಸುಲಕ್ಷ್ಮೀ ಶಯನೇಷು ರಂಭಾ ಕ್ಷಮಯಾಧರಿತ್ರಿ" ಎಂಬಲ್ಲಿ ಕಾರ್ಯದಲ್ಲಿ ದಾಸಿಯಾಗಿ, ಮಂತ್ರಿಯಾಗಿ, ತಾಯಿಯಾಗಿ, ರೂಪದಲ್ಲಿ ಲಕ್ಷ್ಮಿಯಾಗಿ, ಅರ್ಧಾಂಗಿಯಾಗಿ, ಭೂಮಿತಾಯಿಯ ಕ್ಷಮಾಗುಣದಂತೆ ಒಂದು ರೀತಿಯಲ್ಲಿ ಭೂ ಒಡಲಿನಂತೆ ಸೃಷ್ಟಿಗೆ ಕಾರಣ ಸ್ತ್ರೀ ಒಡಲು. ಈ ಸರ್ವವನ್ನು ತನ್ನೊಳಗೆ ಅನ್ವಯಿಸಿಕೊಂಡು ಇತರರಿಗೆ ಮಾದರಿಯಾದಾಗ ಆಕೆ ಸರ್ವರಿಂದ ಗೌರವಕ್ಕೆ ಪಾತ್ರಳಾಗುತ್ತಾಳೆ. ಆದರೆ ಎಷ್ಟೋ ಕಡೆ ಇಂದು ಅಪನಂಬಿಕೆ, ಸಂಸಾರದಲ್ಲಿ ವಿರಸ, ವಿವಾಹ ವಿಚ್ಛೇದನೆ ಮುಂತಾದ ಆರೋಪಗಳಿಗೆ ಕಾರಣಳಾಗಿ ನಿಂದನೆಗೆ ಗುರಿಯಾಗುತ್ತಿದ್ದಾಳೆ. ನಾರಿ 'ಗೃಹಸ್ತ್ರೀ' (ಮನೆಯ ಯಜಮಾನಿ) ಆಗಿರಬೇಕೇ ಹೊರತು 'ಗ್ರಹಸ್ತ್ರೀ' ಆಗಬಾರದು. ಮನೆಯ ಜ್ಯೋತಿ ಆಗಿ ನಂಬಿಕೆಗೆ ಪಾತ್ರಳಾಗಬೇಕು ಎಂಬುದನ್ನು ಅರಿತು ಬಾಳಬೇಕಾಗಿದೆ.

**ತಾಯ ಮೊಲೆವಾಲು ನಂಜಾಗಿ ಕೊಲುವಡೆ**

ಸಾವಿನ ಜೊತೆಗೆ ಸ್ಪರ್ಧೆಗೆ ನಿಂತು ಈ ಜಗಕೆ ಕಂದನ ಪರಿಚಯಿಸುವ ತಾಯಿ ಭೂಲೋಕದ ಅಮೃತವಾದ ತನ್ನ ಎದೆಹಾಲನ್ನು ನೀಡಿ ಜೀವ ಉಳಿಸುವ ಜೀವ ಅದು. ಜನಪದರ "ಸತ್ಯವೇ ನಮ್ಮ ತಾಯಿ ತಂದೆ ಸತ್ಯವೇ ನಮ್ಮ ಬಂಧುಬಳಗ ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚಾನಾ ಪರಮಾತ್ಮನು" ಎಂಬ ಗೋವಿನ ಹಾಡಿನಲ್ಲಿ ಸತ್ಯವೆಂದರೆ ತಾಯಿ ತಾಯಿಯೆಂದರೆ ನಂಬಿಕೆ ಎಂಬ ಸಾರ್ವಕಾಲಿಕ ಸತ್ಯ ಸಂದೇಶ ತಾಯಿ ಎಂಬ ಎರಡಕ್ಷರ. ಬುವಿಯ ಮೇಲೆ ಮಗುವಿಗೆ ಅತ್ಯಂತ ಸುರಕ್ಷಿತವಾದ,ಸುಭದ್ರವಾದ, ನಿಶ್ಚಿಂತೆ ಇರುವ ಸಂಪ್ರೀತಿಗೊಂದ ಪವಿತ್ರವಾದ ಸ್ಥಳ ತಾಯಿಯ ಉದರದೊಳಗಿರುವ ಗರ್ಭ.ಆದರೆ ಇಂದು ಆಧುನಿಕ ಜೀವನ ಶೈಲಿಯ ಕುರುಡು ಪಯಣದಲ್ಲಿ ಆಡಂಬರ, ದೇಹ ಸೌಂದರ್ಯ, ಪ್ರತ್ಯೇಕತೆ, ಸ್ವಪ್ರತಿಷ್ಟೆ ಮುಂತಾದ ಬೆನ್ನ ಹಿಂದೆ ಬಿದ್ದು ಮಾನವೀಯ ಮೌಲ್ಯಗಳ ಅಧಃಪಥನಕ್ಕೆ ಕಾರಣವಾಗಿ ಕೆಲ ತಾಯಂದಿರೇ ಸ್ವಯಂ ಇಚ್ಛೆಯಿಂದ ಗರ್ಭಪಾತ ಮಾಡಿಸಿಕೊಳ್ಳುವ ಒಂದು ಕೆಟ್ಟ ಪರಂಪರೆ ಅಭ್ಯಾಗತವಾಗಿ ಒಳಗೊಳಗೆ ನಡೆಯುತ್ತಿವೆ.

ಕನ್ನಡದ ಖ್ಯಾತ ಕವಯಿತ್ರಿಯಾದ ಮಾಲತಿ ಪಟ್ಟಣಶೆಟ್ಟಿಯವರು "ನಾ ಬರೀ ಭ್ರೂಣವಲ್ಲ" ಎಂಬ ಪದ್ಯದಲ್ಲಿ 'ನನ್ನ ಹಡೆದವ್ವ ನಿನ್ನ ಮೈ ಗಂಧದಿಂದ ಕಿತ್ತುಕೊಂಡರೆ ನಾ ಸತ್ತೇನವ್ವಾ ಚಲ್ಲಬೇಕೇ ಉಡಿಯ ಮುತ್ತು ನಾ ಬರೀ ಭ್ರೂಣವಲ್ಲ' ಎಂಬ ಈ ಪದ್ಯಸಾಲುಗಳು ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತಿರುವ ಸಾಮಾಜಿಕ ವ್ಯವಸ್ಥೆಯ ವಿರುದ್ದ ಭ್ರೂಣಹತ್ಯೆ ಮಾಡಹೊರಟ ಪೈಶಾಚಿಕ ಮನಸ್ಸುಗಳಿಗೆ ಇನ್ನೂ ಕಣ್ಣುಬಿಡದ ಮಗುವಿನ ಆರ್ತನಾದ ಕೇಳಿ ಬದಲಾಗಬೇಕಾಗಿದೆ ಹಾಲುಣಿಸಬೇಕಾದ ತಾಯಿ ಹಾಲಾಹಲ ಉಣಿಸಹೊರಟರೆ ಯಾರು ತಾನೇ ಕಾಪಾಡಲು ಸಾಧ್ಯ ಎಂಬ ಮಾತು ಪ್ರತಿಯೊಬ್ಬ ತಾಯಿಯ ಅಂತಃಕರಣವು ನೀಲಿ ಆಗಸದಂತಾಗಬೇಕಾಗಿದೆ. 'ಮಕ್ಕಳಿಗೆ ತಾಯಾಸೆ ಹಕ್ಕಿಗೆ ಗೂಡಾಸೆ ಬಿತ್ತೀದ ಬೆಳೆಗೆ ಮಳೆಯಾಸೆ' ಎಂಬ ಜನಪದರ ಹಾಡು ಮಮತೆಯ ಸುಳಿಯಾದ ತಾಯಿಯ ಭಾಂದವ್ಯವನ್ನು ಜಗತ್ತಿಗೆ ಸಾರುತ್ತದೆ. ಹೆತ್ತವರಿಗೆ ಹೆಗ್ಗಣ ಮುದ್ದು ಎಂಬ ಗಾದೆಯಂತೆ ಜನ್ಮ ನೀಡುವ ಪ್ರತಿಯೊಬ್ಬ ತಾಯಂದಿರೂ ಅರಿತು ನಡೆದುಕೊಳ್ಳಬೇಕಾಗಿದೆ.

ಕ್ರಿ.ಶ ಸುಮಾರು ೧೩೦೦ ರಲ್ಲಿ ಇದ್ದನೆಂದು ನಂಬಲಾಗಿರುವ ಪುಲಿಗೆರೆಯ ಸೋಮನಾಥನು ಮತ್ತೇಭವಿಕ್ರೀಡಿತ ವೃತ್ತದಲ್ಲಿ ರಚಿಸಲಾಗಿರುವ ಬಹಳ ಜನಪ್ರಿಯವಾಗಿರುವ ಕಾವ್ಯ ಸೋಮೇಶ್ವರ ಶತಕದಲ್ಲಿ ತಿಳಿಸಲಾಗಿರುವ ನಂಬಿಕೆ ಕುರಿತಂತೆ ಒಂದು ಪದ್ಯ ಹೀಗಿದೆ–

ಧರೆ ಬೀಜಂಗಳ ನುಂಗೆ ಬೇಲಿ ಹೊಲನೆಲ್ಲಂ ಮೇದೊಡಂ ಗಂಡ ಹೆಂ
ಡಿರನತ್ಯುಗ್ರದಿಂ ಶಿಕ್ಷಿಸಲ್ ಪ್ರಜೆಗಳಂ ಭೂಪಾಲಕಂ ಬಾಧಿಸಲ್
ತರುವೇ ಪಣ್ಗಳ ಮೆಲ್ಲೆ ಮಾತೆ ವಿಷಮಂ ಪತ್ತೆರ್ಭಕಂಗೂಡಿಸಲ್
ಹರ ಕೊಲ್ಲಲ್ ಪರಕಾಯ್ವನೇ ಹರಹರಾ ಶ್ರೀಚೆನ್ನಸೋಮೇಶ್ವರಾ

ಈ ಮೇಲ್ಕಂಡ ಪದ್ಯಸಾಲುಗಳೂ ಕೂಡ ಬಸವಣ್ಣನವರು ತಿಳಿಸಿರುವ ಮೇಲಿನ ವಚನದಂತೆ ವಿಶ್ವಾಸವನ್ನು ಮಹತ್ವವನ್ನು ಕುರಿತಂತೆ ತಿಳಿಸುತ್ತವೆ. ಹೊಲದಲ್ಲಿ ಬಿತ್ತಿದ ಬೀಜವನ್ನು ನೆಲವೇ ನುಂಗಿಕೊಂಡುಬಿಟ್ಟರೆ, ಹೊಲದ ಸುತ್ತ ಹಾಕುವ ಬೇಲಿಯು ತಾನೇ ಹೊಲದ ಪೈರನೆಲ್ಲಾ ತಾನೇ ಮೇಯ್ದುಕೊಂಡುಬಿಟ್ಟರೆ,ಗಂಡನು ತನ್ನ ಹೆಂಡತಿಯನ್ನು ಕ್ರೂರವಾಗಿ ದಂಡಿಸಿ ನೋವುಕೊಟ್ಟರೆ, ರಾಜನೇ ತನ್ನ ಪ್ರಜೆಗಳನ್ನು ಹಿಂಸೆಮಾಡಿಸಿದರೆ,ಮರವು ತನ್ನಲ್ಲಿ ಬಿಟ್ಟ ಹಣ್ಣುಗಳನ್ನು ತಾನೇ ತಿಂದುಬಿಟ್ಟರೆ, ಹೆತ್ತ ಮಗುವಿಗೆ ತಾಯಿಯೇ ವಿಷವನ್ನು ತಿನ್ನಿಸಿದರೆ, ಈಶ್ವರನು ಪ್ರಾಣಿಗಳನ್ನು ತಾನೇ ಕೊಂದುಹಾಕಿದರೆ ಇತರರು ಕಾಪಾಡಲು ಸಾಧ್ಯವೇ? ಎಂಬ ಪದ್ಯಸಾಲಿನ ಭಾವಾರ್ಥದಲ್ಲಿ ನಂಬಿಕೆಯ ಮಹತ್ವ ಅರಿಯಬಹುದು.

### ಧರೆ ಬೀಜಂಗಳ ನುಂಗೆ ಬೇಲಿ ಹೊಲನೆಲ್ಲಂ ಮೇದೊಡಂ

'ಅನ್ನಂ ಬ್ರಹ್ಮೇತಿ' ಎಂದು ವೇದಗಳು ಸಾರಿವೆ. ಅನ್ನ ನೀಡುವವಳು ಈ ಭೂತಾಯಿ. ಜನಪದರಲ್ಲಿ 'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ ಎಳ್ಳು ಜೀರಿಗೆ ಬೆಳೆಯೋಳ ಬೂಮ್ತಾಯ ಎದ್ದೊಂದು ಗಳಿಗೇ ನೆನೆದೇನ ಎಂಬ ಮಾತುಗಳಲ್ಲಿ ಜೀವಕೋಟಿರಾಶಿಗೆಲ್ಲಾ ಅನ್ನ ನೀಡುವ ಭೂತಾಯಿಯೇ ಪ್ರತ್ಯಕ್ಷ ದೇವರೆಂದು ನಂಬಿರುವ ರೈತನ ಮನೋಧರ್ಮವನ್ನು ಕಾಣುತ್ತೇವೆ. ಇಂತಹ ನಂಬಿಕೆಯೊಂದಿಗೆ ಹೊಲಕ್ಕೆ ಹಾಕಿದ ಬೀಜವನ್ನು ತಾನೇ ನುಂಗಿಬಿಟ್ಟರೆ ಯಾರನ್ನು ನಂಬುವುದು, ಹಾಗೆಯೇ 'ಬೇಲಿಯೇ ಎದ್ದು ಹೊಲ ಮೇಯ್ದಂತೆ' ಎಂಬ ಗಾದೆಯಂತೆ ಬೆಳೆಯನ್ನು ಕಾಪಾಡುತ್ತದೆಂದು ನಂಬಿರುವ ಬೇಲಿಯೆ ಎದ್ದು ಹೊಲದ ಬೆಳೆಯನೆಲ್ಲಾ ನುಂಗಿಹಾಕಿಬಿಟ್ಟರೆ ಯಾರನ್ನು ನಂಬುವುದು ಯಾರನ್ನು ಬಿಡುವುದು ಎಂಬಂತಾಗುತ್ತದೆ.

### ಗಂಡ ಹೆಂಡಿರನತ್ಯುಗ್ರದಿಂ ಶಿಕ್ಷಿಸಲ್ ಪ್ರಜೆಗಳಂ ಭೂಪಾಲಕಂ ಬಾಧಿಸಲ್

ಮದುವೆಗಳು ಸ್ವರ್ಗದಲ್ಲಿ ನಿಶ್ಚಯವಾಗಿರುತ್ತವೆ ಎಂಬ ನಾಣ್ನುಡಿ ದಾಂಪತ್ಯದ ಕೊಂಡಿಗೆ ನಾಂದಿಯಾಡಿದೆ. ಸಂಸಾರವೆಂಬುದು ಸುಖ ದುಃಖಗಳ ಮಿಲನ. ವರಕವಿ ಬೇಂದ್ರೆಯವರು 'ಸರಸ ಜನನ ವಿರಸ ಮರಣ ಸಮರಸವೇ ಜೀವನ' ಎಂಬ ಮಾತು ದಾಂಪತ್ಯದ ಹೊಂದಾಣಿಕೆಯನ್ನು ಸಾರುತ್ತದೆ. ಸಂಸಾರವೆಂಬ ತುಂಬುಬಂಡಿಯಲ್ಲಿ ಎರಡು ಗಾಲಿಗಳು ಸತಿಪತಿಯರು. ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ತಂದೆ ತಾಯಿ, ಬಂಧು–ಬಳಗವನ್ನು ಬಿಟ್ಟು ಮದುವೆ ಎಂಬ ಬಂಧನವಲ್ಲಿ ಗಂಡನನ್ನೇ ಸರ್ವಸ್ವವೆಂದು ನಂಬಿ ಪತಿಯ ಮನ ಮತ್ತು ಮನೆಯನ್ನು ಬೆಳಗಬರುವ ಸತಿಯ ಮನವನ್ನು ಅರಿಯದೆ ಯಾವುದೋ ಒಂದು ಸಣ್ಣ ಕಾರಣದಿಂದ ಅತಿಯಾಗಿ ಶಿಕ್ಷಿಸ ಹೊರಟರೆ ಆತ ಮೃಗಕಿಂತ ಕೀಳಾಗುತ್ತಾನೆ.ಸರಿಸಮಭಾವ ಇಬ್ಬರಲ್ಲೂ ಮಿಳಿತಗೊಳ್ಳಬೇಕು ಇಲ್ಲದಿದ್ದರೆ ಸಂಚಿ ಹೊನ್ನಮ್ಮನು ಹೇಳುವಂತೆ 'ಚಾದಗೆ ತರಿಸಂದು ಮಳೆಗೆ ಬಾಯ್ದೆರೆವ ಚೌದಣಿಯೊಳು ಬರಸಿಡಿಲೆರಗಿತೆಂಬಂತೆ'ಎಂಬಂತಾಗುತ್ತದೆ. ಇದೂ ಕೂಡ ನಂಬಿಕೆಯ ದ್ರೋಹವಾಗುತ್ತದೆ.

"ಅನ್ಯಾಯಂ ಕುರುತೇ ಯದಾ ಕ್ಷಿತಿಪತಿಃ ಕಸ್ತಂ ನಿರೋದ್ಧುಂ ಕ್ಷಮಃ" ಎಂಬ ಮಾತು ನಮ್ಮ ಮಾಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟಿದೆ. ರಕ್ಷಿಸಬೇಕಾದ ರಾಜನೇ ಅನ್ಯಾಯ ಮಾಡಿದರೆ ಅವನನ್ನು ತಡೆಯುವವರು ಯಾರು? ಎಂಬ ಮೇಲಿನ ಮಾತುಗಳನ್ನು ಗಮನಿಸಿದಾಗ ಮೊದಲೆಲ್ಲಾ ರಾಜಪ್ರಭುತ್ವವಿದ್ದಾಗ ರಾಜನು ಪ್ರತ್ಯಕ್ಷದೈವವೆಂದು ನಂಬಿಕೊಂಡು ಬಂದ ಜನಸಾಮಾನ್ಯರು ಇಂದಿನ ಪ್ರಜಾಪ್ರಭುತ್ವದಲ್ಲಿಯೂ ಕೂಡ ಸಂಪೂರ್ಣವಾಗಿ ಮಾಸಿಹೋಗದ ಹಾಗೆ ಭಾವನಾತ್ಮಕವಾಗಿ ಗೌರವಿಸುತ್ತಾ ಬರುತ್ತಿರುವುದನ್ನು ಕಾಣುತ್ತೇವೆ. ಇಂದು ರಾಜರ ಸ್ಥಾನಮಾನವನ್ನು ಪ್ರಜೆಗಳಿಂದ ಆಯ್ಕೆಯಾಗಿರುವ ರಾಜಕಾರಣಿಗಳು ಅನುಭವಿಸುತಿದ್ದಾರೆ ಆದರೆ ತಮ್ಮ ಮೇಲೆ ನಂಬಿಕೆಯಿಟ್ಟು ಕಳುಹಿಸುವ ಇವರಿಗೆ ಬಡವನ ಬೆವರಿನ ಬೆಲೆ ಅರ್ಥವಾದಂತೆ ಕಾಣುತಿಲ್ಲ. ಈ ಮನಸ್ಥಿತಿ ಬದಲಾಗಿ ನಾಯಕರೆಂದರೆ ಪ್ರಭುಗಳಲ್ಲ ಪ್ರಜಾಸೇವಕರು ಎಂಬುದನ್ನು ಅರಿತು ನಡೆದು ಎಲ್ಲರ ನಂಬಿಕೆಗೆ ಪಾತ್ರರಾಗಬೇಕಾಗಿದೆ.

### ತರುವೇ ಪಣ್ಗಳ ಮೆಲ್ಲೆ

ಫಲಬಿಟ್ಟು ಹಣ್ಣು ಹಂಪಲು ನೀಡುವುದು ಮರಗಿಡಗಳ ಪ್ರಕೃತಿ ನಿಯಮ ಮಾತ್ರವಲ್ಲ ಈ ಜಗತ್ತಿನ ಜೀವರಾಶಿಗಳ ನಿರ್ಮಾತೃ. ತನ್ನ ಧರ್ಮವನ್ನು ಮರೆತು ತಾನು ಬಿಟ್ಟ ಫಲವನ್ನು ತಾನೇ ತಿಂದುಬಿಟ್ಟರೆ ಯಾರ ಮೇಲೆ ನಂಬಿಕೆಯಿಡುವುದು. ಇದು ಮಾನವ ಸಹಜ ಸಂಬಂಧಗಳು ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿವೆ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯಲ್ಲೋ ಅಥವಾ ಕ್ರೂರ ಮನಸ್ಥಿತಿಯೊಂದಿಗೋ ಮನುಷ್ಯ ಪ್ರಾಣಿಗಿಂತಲೂ ನೀಚನಾಗುತ್ತಿದ್ದಾನೆ. ತಾನೇ ಸಾಕಿದ ಮಗಳನ್ನು ಅತ್ಯಾಚಾರ ಮಾಡುವ ಅಮಾನವೀಯತೆಯ ನೀಚತನದ ಘಟನೆಗಳನ್ನು ದಿನಪತ್ರಿಕೆಗಳಲ್ಲಿ ಆಗಾಗ್ಗೆ ನೋಡುತ್ತಿರುತ್ತೇವೆ. ಇಂತಹವು ಮಾನವನ ನೈತಿಕತೆಯ ಅಧಃಪಥನದ ಪರಮಾವಧಿ. ಹೀಗಾಗಿ ನಾವು ಮನುಷ್ಯರು ಎಂಬುದನ್ನು ಮರೆಯಬಾರದು ಯಾರೇ ಆಗಲಿ ನೀತಿ ಬೋಧನೆಯ ಬಗ್ಗೆ ಮಾತನಾಡುವವರು ಸಚ್ಚಾರಿತ್ರ್ಯವಂತರಾಗಿರಬೇಕು.

### ಮಾತೆ ವಿಷಮಂ ಪತ್ತೆರ್ಭಕಂಗೂಡಿಸಲ್

'ಮಾತಾ ಗುರುತರಾ ಭೂಮೇಃ'(ಲೋಕೋಕ್ತಿಗಳು ಮಹಾಭಾರತ ಪು.ಸಂ ೮೭೦) ಎಂಬ ಮಾತಿದೆ. ಭೂಮಿಗಿಂತಲೂ ಹೆಚ್ಚಿನ ತೂಕದವಳು ತಾಯಿ ಎಂದು ಮಹಾಭಾರತದಲ್ಲಿ ಉಲ್ಲೇಖಿವಿದೆ. ಮೇಲಿನ ಸಾಲುಗಳೂ ಕೂಡ ಬಸವಣ್ಣನವರು ತಾಯಿ ಎದೆಹಾಲು ನಂಜಾಗಿ ಕೊಲುವೊಡೆ ಎಂಬ ಅರ್ಥದಲ್ಲಿಯೇ ಬಂದಿದೆ. ಬುವಿಯ ಮೇಲೆ ಮಕ್ಕಳಿಗೆ ಪೂಜ್ಯನೀಯ ಜೀವ ಅದು ತಾಯಿ. ದೇವರಿಗೆ ಎಲ್ಲಾ ಸಂದರ್ಭಗಳಲ್ಲಿಯೂ ಎಲ್ಲಾ ಕಡೆಗಳಲ್ಲೂ ಇರಲು ಸಾಧ್ಯವಿಲ್ಲ ಅಂತಾನೇ ತನ್ನ ಸ್ಥಾನವನ್ನು ತುಂಬಲು ತಾಯಿಯನ್ನು ಸೃಷ್ಟಿಸಿದ್ದಾನೆ ಎಂಬ ಜನಜನಿತವಾದ ಮಾತೊಂದಿದೆ ಅದು ಸುಳ್ಳಾಗದಂತೆ ತನ್ನ ಮೇಲಿಟ್ಟ ನಂಬಿಕೆ ಉಳಿಸಿಕೊಳ್ಳಬೇಕಾದುದು ತಾಯಿಯ ಕರ್ತವ್ಯಕೂಡ. ಮಹಾಭಾರತದ ಕುಂತಿಯು ತಾನು ಎತ್ತ ಕಂದನನ್ನು ಸಾಯಲೆಂದು ನೀರಿಗೆ ಎಸೆದ ಕಾರಣ ಕರ್ಣನಿಗೆ ಎಂದೂ ತಾಯಿ ಮಮತೆಯ ಸುಳಿಯಾಗಿ ಕಾಣದೆ ಅಪರಾಧೀ ಪಾಪದಿಂದ ಮುಕ್ತಳಾಗುವುದಿಲ್ಲ. ಇಂದೂ ಕೂಡ ಕೆಲ ತಾಯಂದಿರು ತನ್ನುದರದೊಳಗಿನ ಗರ್ಭವನ್ನು ಕೊಲ್ಲುತ್ತಲೋ, ತಾನೆತ್ತ ಮಗುವನ್ನು ಕಸದಗುಂಡಿಗೆ ಎಸೆಯುತ್ತಲೋ ಆತ್ಮವಂಚನೆ ಮಾಡುತ್ತ ಪಾಪದ ಸುಳಿಯಲ್ಲಿ ಸಿಕ್ಕಿ ನಂಬಿಕೆ ದ್ರೋಹಿಗಳಾಗುತ್ತಿದ್ದಾರೆ. ಹೀಗಾಗಿ ಪ್ರತಿಯೊಬ್ಬ ಸ್ತ್ರೀಯು ತಾಯಿಯ ಸ್ಥಾನಮಾನ ಅರಿತು ನಡೆಯಬೇಕಾಗಿದೆ.

**ಹರ ಕೊಲ್ಲಲ್ ಪರಕಾಯ್ವನೇ**

ಸೃಷ್ಟಿಯ ಒಳಿತಿಗಾಗಿಯೇ ಇರುವ ತ್ರಿಮೂರ್ತಿಗಳಲ್ಲಿ ದೇವಾದಿದೇವ ಎಂದು ಕರೆಯಲ್ಪಡುವ ಶಿವನು ಭಾರತೀಯ ಸಾಂಸ್ಕೃತಿಕ ಆರಾಧ್ಯದೈವ. ಸರ್ವಶಕ್ತ ಭಗವಂತನೇ ಸೃಷ್ಟಿಯ ನಿರ್ಧಾರಕ ಎಂಬ ಭಾವದಿಂದ ನಮ್ಮೊಳಗೆ ದೈವಿಕ ಭಾವನೆಯನ್ನು ಬೇರೆ ಬೇರೆ ರೂಪಗಳಲ್ಲಿ, ಬೇರೆ ಬೇರೆ ಹೆಸರುಗಳಲ್ಲಿ ಆವಿರ್ಭವಿಸಿಕೊಂಡಿದ್ದೇವೆ. ದಿಕ್ಕಿಲ್ಲದವರಿಗೆ ದೇವರೇ ದಿಕ್ಕು ಎಂಬ ಜನಪ್ರಿಯಮಾತೊಂದಿದೆ. ಸೃಷ್ಟಿಕರ್ತ, ಸರ್ವಾಂತರ್ಯಾಮಿ, ಸರ್ವರಕ್ಷಕ, ಕರುಣಾಮಯಿ ಎಂದೆಲ್ಲಾ ಕರೆಯಲ್ಪಡುವ ದೇವರು ಜೀವ ನೀಡುವವನೇ ಹೊರತು ತೆಗೆಯುವವನಲ್ಲ. ತಪ್ಪು ಮಾಡುವುದು ಮಾನವ ಸಹಜಗುಣ; ಕ್ಷಮಿಸುವುದು ದೈವಗುಣ ಎಂಬ ಮಾತೊಂದಿದೆ. ಕ್ಷಮಿಸುವ ಗುಣ ದೇವರಿಗಿಲ್ಲದಿದ್ದರೆ ಈ ಭೂಮಿಯಲ್ಲಿ ಯಾವ ಜೀವಿಯೂ ಇಲ್ಲಿಯ ತನಕ ಬದುಕುತ್ತಿರಲಿಲ್ಲ. ಶಿವನೊಲಿದರೆ ಭಯವಿಲ್ಲ ಶಿವಮುನಿದರೆ ಬದುಕಿಲ್ಲ ಇಂತಹ ನಂಬಿಕೆಯೊಂದಿಗೆ ಬದುಕುವ ನಮಗೆ ಸರ್ವರಕ್ಷಕನಾದ ಹರನೇ ಕೊಲ್ಲಲು ಬಂದರೆ ರಕ್ಷಿಸಲು ಪರರು ಬರುವರೆ? ಇಲ್ಲಿ ಪರ ಎಂದರೆ ಎದುರಾಳಿ,ಅನ್ಯರು,ವೈರಿ,ಶತ್ರು ಇತ್ಯಾದಿ ಅರ್ಥವಿದೆ. ಇಲ್ಲಿನ ಹರ ಸದಾ ರಕ್ಷಕ. ಆ ನಂಬಿಕೆಯೇ ಸೃಷ್ಟಿಯ ಜೀವಾಳ.

**ಉಪಸಂಹಾರ**

ಕೊನೆಯಿಲ್ಲದ ಈ ಪ್ರಕೃತಿಯ ನಿಗೂಢ ಜಗತ್ತಿನಲ್ಲಿ ಯಾವ ಜೀವಿಯೂ ಶಾಶ್ವತವಲ್ಲ ಹುಟ್ಟು ಅನಿರೀಕ್ಷಿತ, ಸಾವು ಖಚಿತ. ಇರುವ ತನಕ ಹೇಗೆ ಬದುಕಬೇಕು ಎಂಬುದನ್ನು ಕುರಿತಂತೆ ಮಹಾತ್ಮರು ಸಾರಿದ ಜೀವನ ಸಂದೇಶ ಸಾರ್ವಕಾಲಿಕವಾಗಿ ನಮ್ಮ ಬದುಕಿಗೆ ದಾರಿದೀಪವಾದವುಗಳು.

ಪ್ರಸ್ತುತ ಲೇಖನದಲ್ಲಿ, ಪ್ರಮುಖವಾಗಿ ಕನ್ನಡ ಸಾಹಿತ್ಯ ಪರಂಪರೆಗೆ ಹೊಸ ಆಯಾಮವನ್ನು ತೋರಿಸಿ ಬರಡು ಭೂಮಿಯಂತಿದ್ದ ಸಾಮಾಜಿಕ ವ್ಯವಸ್ಥೆಗೆ ವೈಚಾರಿಕ ಬೀಜವನ್ನು ಬಿತ್ತಿ ಪೋಷಿಸಿ ಅಂಧರಿಗೆ ದಾರಿತೋರಿಸಿದ ಜಗಜ್ಯೋತಿ ಬಸವೇಶ್ವರರ ಒಂದು ವಚನವನ್ನು ಹಾಗೂ ಪುಲಿಗೆರೆಯ ಸೋಮನಾಥನು ಬರೆದಿರುವ ಸೋಮೇಶ್ವರ ಶತಕದ ಒಂದು ಪದ್ಯಭಾಗವನ್ನು ಕೇಂದ್ರವಾಗಿಟ್ಟುಕೊಂಡು ವಿಮರ್ಶಿಸಲಾಗಿದೆ. ಕಾಲ ಬದಲಾದರೂ ಬದುಕಿನ ಮೌಲ್ಯಗಳ ಸಾರಕ್ಕೆ ನೈತಿಕತೆ ಅದರ ಭೂಮಿಕೆಯಾಗಿರುತ್ತದೆ. ಇಂದು ಮನುಷ್ಯನು ಆಧುನಿಕ ಜೀವನಶೈಲಿಯ ಭರಾಟೆಯಲ್ಲಿ ಸತ್ಯ,ಅಹಿಂಸೆ ನಂಬಿಕೆ, ಕರುಣೆ, ಅನುಕಂಪ, ನೈತಿಕತೆ,ಆತ್ಮಸಾಕ್ಷಿ,ಮನುಷ್ಯತ್ವ ಇವೇ ಮುಂತಾದ ಮಾನವೀಯ ಮೌಲ್ಯಗಳು ಕ್ಷೀಣಿಸುತ್ತಿರುವ ಈ ಸಮಯದಲ್ಲಿ ಮಹನೀಯರ ಸಂದೇಶಗಳು ಗಾಯಕ್ಕೆ ಔಷದಿ ನೀಡುವ ಸಂಜೀವಿನಿಯಾಗಿವೆ. ಆತ್ಮವಂಚನೆಮಾಡಿಕೊಂಡು ಮೌಲ್ಯರಹಿತವಾಗಿ ಬದುಕುವುದು ಅವಿವೇಕಿಗಳ ಲಕ್ಷಣ. ಈ ಹಿನ್ನೆಲೆಯಲ್ಲಿ ಮನುಷ್ಯನು ಇತರರಿಗೆ ತೊಂದರೆಕೊಡದೆ, ನೋವನುಂಟುಮಾಡದೆ, ನಂಬಿಕೆಗೆ ದ್ರೋಹ ಬಗೆಯದೆ ಉತ್ತಮಮಾರ್ಗದಲ್ಲಿ ಬದುಕಿದಾಗ ಮಾತ್ರ ಮಾನವ ಜನ್ಮಕ್ಕೆ ಸಾರ್ಥಕ್ಯವುಂಟಾಗುತ್ತದೆ.

**ಪರಾಮರ್ಶನ ಗ್ರಂಥಗಳು**


1. ಬಸವಣ್ಣನವರ ವಚನಗಳು ಸಂಪಾದಕರು. ಡಾ. ಎಲ್ ಬಸವರಾಜು ಪ್ರಕಾಶಕರು–ಗೀತಾ ಬುಕ್ ಹೌಸ್, ಮೈಸೂರು
2. ಪುಲಿಗೆರೆಯ ಸೋಮಕವಿಯ ಸೋಮೇಶ್ವರ ಶತಕ ಸಂಪಾದಕರು ಡಾ. ಅಕ್ಕಮಹಾದೇವಿ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
3. ಸಂಸ್ಕೃತ ಲೋಕೋಕ್ತಿಗಳು ಮತ್ತು ಕವಿಸೂತ್ರಗಳು ಸಂಪಾದಕರು ಎಚ್.ಎಸ್. ಅಚ್ಚಪ್ಪ ೩೨೩,೫ ಮೇನ್,ಜಯನಗರ,ಮೈಸೂರು ಮುದ್ರಣಾ ಸ್ಥಳ ಶಾರದಾ ಪ್ರೆಸ್ ಕಾರ್ ಸ್ಟ್ರೀಟ್, ಮಂಗಳೂರು
4. ನಮ್ಮ ಗಾದೆಗಳು ಡಾ. ರಾಮೇಗೌಡ ಡಿ.ವಿ.ಕೆ ಮೂರ್ತಿ ಪಬ್ಲಿಕೇಷನ್, ಮೈಸೂರು.
5. ಎಷ್ಟೊಂದು ನಾವೆಗಳು ಮಾಲತಿ ಪಟ್ಟಣಶೆಟ್ಟಿ ಸಾಹಿತ್ಯ ಭಂಡಾರ, ಹುಬ್ಬಳ್ಳಿ
6. ಹದಿಬದೆಯ ಧರ್ಮ– ಸಂಚಿಯ ಹೊನ್ನಮ್ಮ